**ದಿನಾಂಕಃ 21.10.2019 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರಿದ ಪಾಟೀ–ಸವಾಲುಃಪ್ರತಿವಾದಿ ಪರ ಶ್ರೀ ಜಿ.ಕೆ.ಎಂ ವಕೀಲರಿಂದಃ–**

ಕ್ರಯ ಕರಾರು ಪತ್ರಕ್ಕೆ ನಾಗರಾಜ್‌ರವರು ಸಹಿ ಹಾಕಿಲ್ಲ ಎಂದು ಹೇಳಿದ್ದೀರಾ ಎಂದರೆ ಸರಿ. ಸಾಕ್ಷಿ ಮುಂದುವರಿದು ಫೋನ್‌ನಲ್ಲಿ ನಾನು ಹೇಳುವ ಪ್ರಕಾರ ನಡೆದುಕೊಳ್ಳುತ್ತೇವೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ಗುಂಡಪ್ಪನವರು ನಾಗರಾಜ್‌ರವರಿಗೆ ಫೋನ್ ಮಾಡಿದಾಗ ನೀವು ಹೇಳಿದಂತೆ ನಾನು ನಡೆದುಕೊಳ್ಳುತ್ತೇನೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ಈ ವಿಷಯವನ್ನು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಕ್ರಯ ಕರಾರು ಪತ್ರಕ್ಕೆ ಸಹಿ ಹಾಕಿಕೊಡಿ ಎಂದು ನೀವು ನಾಗರಾಜ್‌ರವರಿಗೆ ಕೇಳಿದ್ದಿರಾ ಎಂದರೆ ಸಾಕ್ಷಿ ಕೇಳಿದ್ದೇನೆ ಎಂದು ಹೇಳುತ್ತಾರೆ. ನೀವು ಯಾವಾಗ ಕೇಳಿದ್ದಿರಿ ಎಂದರೆ ಸಾಕ್ಷಿ ಕ್ರಯಕರಾರು ಪತ್ರ ಮಾಡುವಾಗಲೇ ಕೇಳಿದ್ದೆ ಎಂದು ಹೇಳುತ್ತಾರೆ. ನಾನು ಖುದ್ದಾಗಿಯೂ ಸಹ ಕೇಳಿದ್ದೆ ಮತ್ತು ಫೋನ್‌ನಲ್ಲಿಯೂ ಸಹ ಕೇಳಿದ್ದೇನೆ ಎಂದು ಹೇಳುತ್ತಾರೆ. ಕರಾರು ಆದ ನಂತರ ಯಾವಾಗ ಖುದ್ದಾಗಿ ಕೇಳಿದ್ದಿರಿ ಎಂದರೆ ಸಾಕ್ಷಿ ದಿನಾಂಕಃ23.11.2009 ರಲ್ಲೇ ಕೇಳಿದ್ದೇನೆ ಎಂದು ಹೇಳುತ್ತಾರೆ. ಆ ದಿನ ಬಿಟ್ಟರೆ ಮತ್ತೆ ನಾಗರಾಜ್‌ರವರಿಗೆ ಕೇಳಿರುವುದಿಲ್ಲ.

ನೀವು ಮಾತನಾಡಿದಂತೆ ಸಹಿ ಮಾಡಿ ಕೊಡುತ್ತೇನೆ ಎಂದು ಹೇಳಿದ್ದಿರಿ ಎಂದು ನಾಗರಾಜ್‌ರವರಿಗೆ ವಕೀಲರ ಮೂಲಕ ನೋಟೀಸ್ ಕಳುಹಿಸಿದ್ದೀರಾ ಎಂದರೆ ಸಾಕ್ಷಿ ಕಳುಹಿಸಿದ್ದೇನೆ ಎಂದು ಹೇಳುತ್ತಾರೆ. ಕ್ರಯಕರಾರು ಪತ್ರಕ್ಕೆ ಸಹಿ ಮಾಡಿಕೊಡಿ ಎಂದು ಯಾವಾಗ ನೋಟೀಸ್ ಕಳುಹಿಸಿದ್ದಿರಿ ಎಂದರೆ ಸಾಕ್ಷಿ ನೋಟೀಸ್ ದಿನಾಂಕ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ನಾಗರಾಜ್‌ರವರಿಗೆ ನೀವು ಯಾವುದೇ ನೋಟೀಸ್ ಕಳುಹಿಸಿಲ್ಲ ಎಂದರೆ ಸರಿಯಲ್ಲ. ನೋಟೀಸ್ ಕೊಡುವುದಕ್ಕಿಂತ ಮುಂಚೆ ನೀವು ಕರಾರು ಆಗಿದೆ ಎಂದು ಹೇಳುವುದಕ್ಕೆ, ಕ್ರಯಪತ್ರ ಮಾಡಿಕೊಡಿ ಎಂದು ಅವರನ್ನು ಹೋಗಿ ಖುದ್ದಾಗಿ ಕೇಳಿದ್ದೀರಾ ಎಂದರೆ ಸಾಕ್ಷಿ ಕೇಳಿದ್ದೇನೆ ಎಂದು ಹೇಳುತ್ತಾರೆ. 4–5 ಸಾರಿ ಹೋಗಿ ಕೇಳಿದ್ದೇನೆ ಎಂದು ಹೇಳುತ್ತಾರೆ. 4–5 ಸಲ ಹೋಗಿದ್ದ ದಿನಾಂಕ ನನಗೆ ನೆನಪಿಲ್ಲ. ನೀವು ಅವರಿಗೆ ಹೋಗಿ ಕೇಳಿದ್ದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

ನಿಪಿ–17 ನೋಟೀಸ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕಾದ ದಿನಾಂಕ ನಮೂದಿಸಿಲ್ಲ ಎಂದರೆ ಸಾಕ್ಷಿ ದಿನಾಂಕ ಬರೆದಿಲ್ಲ ಎಂದು ಹೇಳುತ್ತಾರೆ. ನಿಪಿ–18 ರ ಪ್ರಕಾರ 1 ನೇ ಪ್ರತಿವಾದಿಗೆ ನೋಟೀಸ್ ಕೊಟ್ಟಿದ್ದೀರಾ, ಯಾವ ಕಾರಣಕ್ಕೆ ನೋಟೀಸ್ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನೀವು ಮಾತನಾಡಿದಂತೆ ಕ್ರಯ ಪತ್ರ ಮಾಡಿಕೊಡಿ ಎಂದು ಕೇಳಿ ನೋಟೀಸ್ ಕಳುಹಿಸಿದ್ದೇನೆ ಎಂದು ಹೇಳುತ್ತಾರೆ. ನಿಪಿ–19 ನ್ನು ಯಾವ ಕಾರಣಕ್ಕೆ ನೋಟೀಸ್ ಕಳುಸಿದ್ದಿರಿ ಎಂದರೆ ಸಾಕ್ಷಿ ಮೊದಲು ಕೊಟ್ಟಿದ್ದ ನೋಟೀಸ್ ಮುಟ್ಟದೇ ಇರುವುದರಿಂದ ಮತ್ತೊಂದು ನೋಟೀಸ್ ಕಳುಹಿಸಿದ್ದೆ ಎಂದು ಹೇಳುತ್ತಾರೆ. ನಿಪಿ–23 ರ ಪ್ರಕಾರ ನಾಗರಾಜ್‌ರವರು ತಮ್ಮ ಪ್ರತ್ಯುತ್ತರ ನೋಟೀಸ್‌ನಲ್ಲಿ ನೀವು ಅವರ ಅಣ್ಣ–ತಮ್ಮಂದಿರ ಜೊತೆ ಮಾಡಿಕೊಂಡ ವ್ಯವಹಾರ, ಕ್ರಯ ಕರಾರು ಪತ್ರದ ಬಗ್ಗೆ ನನಗೆ ಗೊತ್ತಿಲ್ಲ ಎಂದು ಪ್ರತ್ಯುತ್ತರ ನೀಡಿದ್ದಾರೆ ಎಂದರೆ ಸುಳ್ಳು ಎಂದು ಹೇಳುತ್ತಾರೆ.

3 ನೇ ಪ್ರತಿವಾದಿ ನೀವು ಕಳುಹಿಸಿದ ನೋಟೀಸ್ ಮೇರೆಗೆ ನಿಪಿ–22 ರ ಪ್ರಕಾರ ನಿಮ್ಮ ವಕೀಲರಿಗೆ ನೋಟೀಸ್ ನೀಡಿ ಕ್ರಯ ಕರಾರುಪತ್ರದ ನೋಟರಿಯವರ ಪ್ರತಿಯನ್ನು ಕಳುಹಿಸಿಕೊಡಿ

ಎಂದು ಕೇಳಿದ್ದರು ಎಂದರೆ ಸಾಕ್ಷಿ ಕೇಳಿಲ್ಲ ಎಂದು ಹೇಳುತ್ತಾರೆ. ನಿಪಿ–22 ರ ನೋಟೀಸ್‌ನ ವಿಚಾರವನ್ನು ನಿಮ್ಮ ವಕೀಲರು ನಿಮಗೆ ಹೇಳಿದ್ದರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿ ಏನು ಪ್ರತ್ಯುತ್ತರ ಕೊಟ್ಟಿದ್ದಾರೆ ಎಂದು ನಿಮ್ಮ ವಕೀಲರಿಗೆ ಕೇಳಿದ್ದಿರಾ ಎಂದರೆ ಸಾಕ್ಷಿ ನಾನು ಕೇಳಿಲ್ಲ ಎಂದು ಹೇಳುತ್ತಾರೆ. ನಿಪಿ–22 ರ ವಿಚಾರ ನಿಮ್ಮ ವಕೀಲರಿಗೆ ಕೇಳಿ ತಿಳಿದುಕೊಂಡಿದ್ದರೂ ಸಹ ನನಗೆ ನೆನಪಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನಿಪಿ–22 ರ ಪ್ರಕಾರ ಕ್ರಯಕರಾರು ಪತ್ರದ ನೋಟರಿಯವರ ಪ್ರತಿಯನ್ನು ಕಳುಹಿಸಿಕೊಡಿ ಎಂದು ಕೇಳಿದ್ದರೂ ಸಹ ಅವರು ಕೊಟ್ಟಿಲ್ಲ ಎಂದರೆ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ.

ನನ್ನ ಪ್ರಕರಣದ ಜೊತೆ ಏನೇನು ದಾಖಲೆ ಹಾಕಿದ್ದೇನೆ ಎಂದು ನನಗೆ ಗೊತ್ತು. ನೀವು ಹಾಕಿದ ಪಹಣಿಗಳಲ್ಲಿ ನಿಮ್ಮ ವಕೀಲರಿಗೆ ತೋರಿಸಿ ಅದರಲ್ಲಿ ಜಮೀನಿನ ಮೇಲೆ ಯಾವುದಾದರೂ ಸಾಲ ಇದೆಯಾ ಎಂದು ನಿಮ್ಮ ವಕೀಲರಿಗೆ ಕೇಳಿದ್ದಿರಾ ಎಂದರೆ ಸಾಕ್ಷಿ ನಾನು ಕೇಳಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು ನಿಮಗೆ ಕ್ರಯಕರಾರು ಪತ್ರ ಮಾಡಿದ್ದಾರೆ ಎಂದು ಹೇಳುತ್ತಿದ್ದೀರಾ ಅದಕ್ಕಿಂತ ಹಿಂದೆ ಹರಿಯಬ್ಬೆ ಸಿಜಿಬಿ ಬ್ಯಾಂಕ್‌ನಲ್ಲಿ ಜಮೀನನ್ನು ಒತ್ತೆ ಇಟ್ಟು ರೂ.3,19,000/– ಸಾಲ ಮಾಡಿರುವುದರಿಂದ ನಿಮಗೆ ಮಾರಾಟ ಮಾಡುತ್ತೇನೆ ಎಂದು ಕರಾರು ಪತ್ರ ಮಾಡುವ ಅವಶ್ಯಕತೆ ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತನ್ನು ಕ್ರಯಕರಾರು ಪತ್ರದ ಪ್ರಕಾರ ಮಾರಾಟ ಮಾಡುತ್ತೇವೆಂದು ಒಪ್ಪಿಕೊಂಡಿಲ್ಲ ಎಂದರೆ ಸರಿಯಲ್ಲ.

ನಿಪಿ–26 ರ ಪ್ರಕಾರ ಸರ್ಕಾರಿ ಬೆಲೆಯ ಪ್ರಕಾರ ನಿಮ್ಮ ಕ್ರಯ ಕರಾರು ಪತ್ರ ಇಲ್ಲ ಅದಕ್ಕಿಂತ ಕಡಿಮೆ ಬೆಲೆಯನ್ನು ನಮೂದಿಸಿದ್ದೀರಾ ಎಂದರೆ ಸರಿಯಲ್ಲ. ಕ್ರಯಕರಾರು ಪತ್ರದಲ್ಲಿ ನಮೂದಿಸಿರುವ ಬೆಲೆಯು ಕಡಿಮೆಯಾಗಿರುವುದರಿಂದ ಅದು ಕಾನೂನು ಪ್ರಕಾರ ಊರ್ಜಿತವಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರು ಏನು ತಕರಾರು ಹಾಕಿದ್ದಾರೆ ಎಂದು ನಾನು ನಮ್ಮ ವಕೀಲರನ್ನು ಕೇಳಿ ತಿಳಿದುಕೊಂಡಿಲ್ಲ.

**ಮುಂದಿನ ಪಾಟೀ ಸವಾಲಿಗೆ ಕಾಲಾವಾಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.